ಈ) ಚಿಮ್ಮಲಗಿ ಏತ ನೀರಾವರಿ ಯೋಜನೆಗಾಗಿ ಜಾಕ್‌ವೆಲ್ ಕಾಮಗಾರಿಯ ಟರ್ನ್ ಕೀ ಆಧಾರದ ಟೆಂಡರ್ ಅನುಮೋದನೆ ಹಂತದಲ್ಲಿದ್ದು, ಸದರಿ ಹೆಡ್‌ವರ್ಕ್ ಕಾಮಗಾರಿ ಪೂರ್ಣಗೊಳಿಸಲು 27 ತಿಂಗಳುಗಳ ಅವಧಿಯನ್ನು ನಿಗದಿಪಡಿಸಿದೆ.

ಶ್ರೀ 761 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನ ಕುಡುಮಲ ಕುಂಟೆ ಗ್ರಾಮದ ಬಳಿ ಕೆಐಎಡಿಬಿ ವತಿಯಿಂದ ವಶಪಡಿಸಿಕೊಂಡಿರುವ ಜಮೀನುಗಳನ್ನು ಅರ್ಜಿ ನೀಡಿರುವ ಕೈಗಾರಿಕೋದ್ಯಮಿಗಳಿಗೆ ಯಾವಾಗ ಭೂಮಿ ನೀಡಲಾಗುವುದು;

ಆ) ಎಲ್ಲಾ ಅರ್ಜಿದಾರರುಗಳು ಸಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಉತ್ಸುಕರಾಗಿದ್ದಾರೆಯೇ;

ಇ) ಹಾಗಿದ್ದಲ್ಲಿ, ಪ್ರತಿ ಎಕರೆಗೆ ಎಷ್ಟು ಮೌಲ್ಯವನ್ನು ನಿಗದಿ ಮಾಡಲಾಗಿದೆ;

ಈ) ಕೈಗಾರಿಕೋದ್ಯಮಿಗಳಿಗೆ ಜಮೀನು ಖರೀದಿಗೆ ಬೇಡಿಕೆ ಹೆಚ್ಚಿದರೆ ಇನ್ನೂ ಒಂದು ಸಾವಿರ ಎಕರೆ ಜಮೀನನ್ನು ವಶಪಡಿಸಿಕೊಳ್ಳಲು ಸರಕಾರವು ಆಲೋಚಿಸಿದೆಯೇ; (ವಿವರ ಒದಗಿಸುವುದು)?

ಶ್ರೀ ಮುರುಗೇಶ್ ಆರ್.ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಗೌರಿಬಿದನೂರು ತಾಲ್ಲೂಕಿನ ಕುಡುಮಲಕುಂಟೆ ಗ್ರಾಮದ ಬಳಿ ಕೆಐಎಡಿಬಿ ವತಿಯಿಂದ 238 ಎಕರೆ ಜಮೀನುಗಳನ್ನು ಭೂಸ್ವಾಧೀನ ಪಡಿಸಿ ಕೊಂಡಿದ್ದು, ಸದರಿ ಜಮೀನುಗಳಲ್ಲಿ ಕೈಗಾರಿಕಾ ಲೇಔಟನ್ನು ನಿರ್ಮಿಸಲು ಈಗಾಗಲೇ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಇನ್ನು ಸುಮಾರು 3 ತಿಂಗಳೊಳಗೆ ಕೈಗಾರಿಕೋದ್ಯಮಿಗಳಿಗೆ ಭೂಮಿಯನ್ನು ಹಂಚಿಕೆ ಮಾಡಲಾಗುವುದು.

ಆ) ಹೌದು.

ಇ) ಹಂಚಿಕೆ ದರ ಪ್ರತಿ ಎಕರೆಗೆ ರೂ. 24.50 ಲಕ್ಷಗಳಂತೆ ಮಂಡಳಿಯಿಂದ ನಿಗದಿಪಡಿಸಲಾಗಿದೆ.

ಈ) ಈಗಾಗಲೇ ವಶಪಡಿಸಿಕೊಂಡಿರುವ 238 ಎಕರೆ ಜಮೀನುಗಳಿಗೆ ಅರ್ಜಿಗಳು ಬಂದಿದ್ದು, ಕೈಗಾರಿಕೋದ್ಯಮಿಗಳಿಂದ ಹೆಚ್ಚಿನ ಜಮೀನುಗಳಿಗೆ ಬೇಡಿಕೆ ಇರುವುದರಿಂದ ಸದರಿ ಕೈಗಾರಿಕಾ ಪ್ರದೇಶದ ಪಕ್ಕದಲ್ಲಿ ಸುಮಾರು 500 ಎಕರೆ ಅಧಿಕ ಜಮೀನುಗಳನ್ನು ಗುರುತಿಸಿ ವಶಪಡಿಸಿಕೊಳ್ಳಲು ಕ್ರಮ ಜರುಗಿಸಲಾಗುವುದು.

746 ಶ್ರೀ ಮಾನಪ್ಪ ವಜ್ಜಲ್ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಿಂಗಸಗೂರು ತಾಲ್ಲೂಕಿನ ಬಸವಸಾಗರ ಜಲಾಶಯವನ್ನು ವೀಕ್ಷಿಸಲು ಬರುವ ಪ್ರವಾಸಿಗರು ಹಾದು ಹೋಗುವ ರಸ್ತೆಗಳು ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ಸೂಕ್ತ ರಸ್ತೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ಬಂದಿದೆ.

ಆ) ಲಿಂಗಸಗೂರು – ನಾರಾಯಣಪುರ ಹಾಗೂ ಚಿತ್ತಾಪುರ–ಲಿಂಗಸಗೂರು ರಸ್ತೆಗಳು ಬಸವಸಾಗರ ಜಲಾಶಯಕ್ಕೆ ಹಾದು ಹೋಗುವ ಪ್ರಮುಖ ಜಿಲ್ಲಾ ರಸ್ತೆಗಳಾಗಿದ್ದು, ನಿಗಮದಲ್ಲಿ ಪುನರ್ ನಿರ್ಮಾಣ ಕಾಮಗಾರಿಗಾಗಿ ಅಂದಾಜು ತಯಾರಿಸಲಾಗಿದ್ದು, ಅನುದಾನ ಲಭ್ಯತೆಗೆ ಅನುಗುಣವಾಗಿ ತಯಾರಿಸಲಾಗಿದ್ದು, ಅನುದಾನದ ಲಭ್ಯತೆಗೆ ಅನುಗುಣವಾಗಿ ಕಾಮಗಾರಿಗೆ ಅನುದಾನ ಒದಗಿಸಿ ಕೈಗೊಳ್ಳುವುದನ್ನು ಪರಿಶೀಲಿಸಲಾಗುವುದು.

206 ಶ್ರೀ ಜಾರಕಿಹೊಳಿ ಸತೀಶ್ ಲಕ್ಷ್ಮಣರಾವ್ (ಯಮಕನಮರಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರವು ಸ್ಥಾಪನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಎಷ್ಟು?